◆ ಒಂದು ಐಡಿಯಾ ಯಾಕೆ ನಿಮ್ಮನ್ನು ಸೆಳೆಯುತ್ತದೆ? ಅದು ಗದ್ಯವೋ ಪದ್ಯವೋ ಹೇಗೆ ನಿರ್ಧರಿಸುವಿರಿ?

ಅದಕ್ಕೆ ನನ್ನ ಬಳಿ ಯಾವುದೇ ಲಿಖಿತ ನಿಯಮಗಳಿಲ್ಲ. ಗದ್ಯಕ್ಕೆ ಐಡಿಯಾ ಮೊದಲು ಬರುತ್ತದೆ. ಅದನ್ನು ಬೆಳೆಸಬೇಕು ಅನ್ನಿಸುತ್ತದೆ. ಮೂಲ ಐಡಿಯಾ ಬದಲಾಗಬಹುದು, ಆದರೆ ಸಾರ ಅದೇ ಆಗಿರುತ್ತದೆ. ಗದ್ಯ ಒಂದು ಸಾಧನ. ಆದರೆ, ಕವನದ ವಿಷಯಕ್ಕೆ ಬಂದಾಗ ಕವಿ ಸಾಧನವಾಗುತ್ತಾನೆ. ಯಾರ ಸಾಧನ ಎಂದು ಹೇಳುವುದು ಕಷ್ಟ. ಬಹುಶಃ ಭಾಷೆಯದಿರಬಹುದು. ನನ್ನ ಪಾಲಿಗೆ ಕವಿತೆ ಎನ್ನುವುದು ಪೂರ್ವಯೋಜಿತವಾದದ್ದು. ಅತೀಂದ್ರಿಯ ಮಟ್ಟದಿಂದ ಭಾಷೆಯ ಮೂಲಕ ಹರಿದುಬರುತ್ತದೆ. ಅದು ಜನರ ಸಂಸ್ಕೃತಿ, ನೆನಪುಗಳೊಂದಿಗೆ ಸಂಬಂಧ ಹೊಂದಿದೆ. ಅನಾದಿಯಾದ ನಿರಾಕರ ಚೈತನ್ಯದ ಚಿಲುಮೆಯು ಮೌಖಿಕ ಲಯದೊಂದಿಗೆ ನಿಕಟ ಸಂಬಂಧ ಹೊಂದಿದೆ.

◆ ಹಾಗಾದರೆ ಗದ್ಯಕ್ಕೆ ಲಯವಿಲ್ಲವೇ?

ಗದ್ಯಕ್ಕೆ ಲಯವಿದೆ. ಆದರೆ, ಅದು ಪದ್ಯದಂತಲ್ಲ. ಮೀಟರ್ ಮತ್ತು ಲಯದ ನಡುವೆ ಗೊಂದಲ ಬೇಡ. ಮೀಟರ್ ಲಯದ ಅಭಿವ್ಯಕ್ತಿಯಾಗಿರಬಹುದು. ಆದರೆ, ಅದು ವಿಭಿನ್ನ, ಏಕೆಂದರೆ ಅದು ಯಾಂತ್ರಿಕವಾದದ್ದು. ಅದಕ್ಕೆ ಎಲಿಯೆಟ್ ಹೇಳುವುದು ಕಾಲಕಾಲಕ್ಕೆ ಪ್ರತಿ ಭಾಷೆಯೂ ತನ್ನ ಮೂಲ ಲಯಗಳಿಗೆ ಅಂದರೆ ದೈನಂದಿನ ಭಾಷೆಯ ಲಯಗಳಿಗೆ ಹಿಂತಿರುಗಬೇಕು.

◆ ಗದ್ಯ ಪದ್ಯಗಳ ಗಡಿಯನ್ನು ಯಾವಾಗಲೂ ನಿಖರವಾಗಿ ಗುರುತಿಸುತ್ತಿರಾ?

ಅವುಗಳನ್ನು ಬೇರೆ ಬೇರೆಯಾಗಿ ಇಡಲು ಪ್ರಯತ್ನಿಸುತ್ತೇನೆ. ಆದರೆ, ಯಾವಾಗಲೂ ಸಫಲವಾಗುವುದಿಲ್ಲ. ಗದ್ಯದೊಂದು ತುಣುಕು ಅಂದುಕೊಳ್ಳದೆ ಪದ್ಯವಾಗಿಬಿಡಬಹುದು. ಆದರೆ, ಪದ್ಯವನ್ನು ಎಂದೂ ಪ್ರಬಂಧ ಇಲ್ಲವೇ ಕತೆ ಮಾಡಿಲ್ಲ. **'Eagle or Sun'**, **'The Monkey Grammarian'** ಪುಸ್ತಕಗಳಲ್ಲಿ ಗದ್ಯವನ್ನು ಪದ್ಯದ ಅಂಚಿಗೆ ತಂದುನಿಲ್ಲಿಸುವ ಪ್ರಯತ್ನ ಮಾಡಿದ್ದೇನೆ. ಎಷ್ಟು ಯಶಸ್ವಿಯಾಗಿದ್ದೇನೋ ಗೊತ್ತಿಲ್ಲ.

◆ ಪೂರ್ವಯೋಜಿತ ಮತ್ತು ತಿದ್ದಿ ಬರೆಯುವ ಕುರಿತು ಮಾತಾಡಿದೆವು. ಸ್ಫೂರ್ತಿಗೂ ಇವುಗಳಿಗೂ ನಡುವಿನ ಸಂಬಂಧವೇನು?

ಸ್ಫೂರ್ತಿ ಮತ್ತು ಪೂರ್ವಯೋಜಿತ ಎರಡೂ ಒಂದೇ ಪ್ರಕ್ರಿಯೆಯ ಎರಡು ಹಂತಗಳು. ಒಂದು ಮತ್ತೊಂದಕ್ಕೆ ಪೂರಕ. ಅದೊಂದು ನದಿಯ ರೀತಿ. ಎರಡು ದಂಡೆಗಳ ನಡುವೆ ಮಾತ್ರ ನದಿ ಹರಿಯಬಲ್ಲದು. ಪೂರ್ವಯೋಜಿತವಲ್ಲದಿದ್ದರೆ ಸ್ಫೂರ್ತಿ ಚದರುತ್ತದೆ. ಪ್ರಬಂಧದಂತಹ ಪ್ರಕಾರದಲ್ಲೂ ಪೂರ್ವಯೋಜಿತದ ಪಾತ್ರ ಸೀಮಿತವಾದದ್ದು. ನೀವು ಬರೆಯಲು ಶುರುಮಾಡಿದಂತೆ ಪಠ್ಯವು ಸ್ವತಂತ್ರವಾಗುತ್ತದೆ, ಬದಲಾಗುತ್ತದೆ. ಅದರ ಸೆರಗು ಹಿಡಿದು ಹಿಂಬಾಲಿಸಲು ನಿಮ್ಮನ್ನು ಒತ್ತಾಯಿಸುತ್ತದೆ. ಪಠ್ಯ ಯಾವಾಗಲೂ ಲೇಖಕನಿಂದ ಬೇರೆಯಾಗಿ ನಿಲ್ಲುತ್ತದೆ.

◆ ಹಾಗಾದರೆ ಯಾಕೆ ತಿದ್ದಬೇಕು?

ಅಭದ್ರತೆಯಿಂದ ಎನ್ನುವುದರಲ್ಲಿ ಅನುಮಾನವೇ ಇಲ್ಲ. ಜೊತೆಗೆ, ಪರಿಪೂರ್ಣತೆಯ ಹುಚ್ಚುಬಯಕೆ. ಎಲ್ಲ ಪಠ್ಯಗಳಿಗೂ ಅದರದೇ ಬದುಕಿದೆ. ಅವು ಲೇಖಕರಿಂದ ಸ್ವತಂತ್ರವಾಗಿರುತ್ತವೆ. ಕವನ ಕವಿಯನ್ನಲ್ಲ ಕಾವ್ಯವನ್ನು ಅಭಿವ್ಯಕ್ತಿಸುತ್ತದೆ. ಹಾಗಾಗಿ, ಕವನವನ್ನು ಪರಿಷ್ಕರಿಸುವುದು